ಬೆಂಗಳೂರು ನಗರ ವಿಶ್ವವಿದ್ಯಾನಿಲಯ

ಆಗು ನೀ ಅನಿಕೇತನ
BE BOUNDLESS

BENGALURU CITY UNIVERSITY

Office of the Registrar (Evaluation), Central College Campus, Dr.AmbedkarVeedhi,
Bengaluru – 560 001. E-mail: registrarevlubcu@gmail.com, Ph.No.080-2229555

ಸಂಖ್ಯೆ: ಬೆಂ.ಕೇ.ವಿ/ಪ.ವಿ/ಪರೀಕ್ಷಾ ಮೌಲ್ಯಮಾಪನ/ಯು.ಜಿ/2022–23 ದಿನಾಂಕ:20.04.2023

# ಸುತ್ತೋಲೆ

**ವಿಷಯ: 2022–23ನೇ ಸಾಲಿನ ಸ್ನಾತಕ ಕೋರ್ಸುಗಳ 1ನೇ(ಫ್ರೆಷರ್ಸ್ ಮತ್ತು ರಿಪೀಟರ್ಸ್) ಮತ್ತು 3ನೇ ಸೆಮಿಸ್ಟರ್ (ಫ್ರೆಷರ್ಸ್), UUCMS ಪರೀಕ್ಷೆಗಳ ಮೌಲ್ಯಮಾಪನಕಾರ್ಯಕ್ಕೆ ಎಲ್ಲಾ ಅರ್ಹ ಅಧ್ಯಾಪಕರನ್ನು (ಅತಿಥಿಉಪನ್ಯಾಸಕರು ಸೇರಿದಂತೆ) ಕಳುಹಿಸಿಕೊಡುವ ಬಗ್ಗೆ.**

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಮಗೆ ತಿಳಿಸುವುದೇನೆಂದರೆ, ಮಾರ್ಚ್ /ಏಪ್ರಿಲ್–2023 ರಲ್ಲಿ ನಡೆದಿರುವ ಸ್ನಾತಕ ಕೋರ್ಸುಗಳ **1ನೇ(ಫ್ರೆಷರ್ಸ್ ಮತ್ತು ರಿಪೀಟರ್ಸ್) ಮತ್ತು 3ನೇ ಸೆಮಿಸ್ಟರ್ ((ಫ್ರೆಷರ್ಸ್), UUCMS** ಪರೀಕ್ಷೆಗಳ ಮೌಲ್ಯಮಾಪನ ಕಾರ್ಯ ಆರಂಭಿಸಿ ಶೀಘ್ರವಾಗಿ ಫಲಿತಾಂಶಗಳನ್ನು ಪ್ರಕಟಿಸಬೇಕಿದೆ.

ದಿನಾಂಕ 24.04.2023 ರಿಂದ ಮೌಲ್ಯಮಾಪನ ಕಾರ್ಯ ಆರಂಭವಾಗಲಿದ್ದು ತಾವು ತಪ್ಪದೇ ತಮ್ಮ ಕಾಲೇಜಿನ ಎಲ್ಲಾ ಅರ್ಹ ಅಧ್ಯಾಪಕರನ್ನು(ಅತಿಥಿ ಉಪನ್ಯಾಸಕರು ಸೇರಿದಂತೆ) ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಭಾಗವಹಿಸಲು ನಿರ್ದೇಶನ ನೀಡಬೇಕೆಂದು / ಸೂಚಿಸಬೇಕೆಂದು ಕೋರಲಾಗಿದೆ. **ಸ್ನಾತಕ ಕೋರ್ಸುಗಳ 1ನೇ(ಫ್ರೆಷರ್ಸ್ ಮತ್ತು ರಿಪೀಟರ್ಸ್) ಮತ್ತು 3ನೇ ಸೆಮಿಸ್ಟರ್ ((ಫ್ರೆಷರ್ಸ್), UUCMS ಪರೀಕ್ಷೆಗಳ ಸೆಮಿಸ್ಟರಿನ ಮೌಲ್ಯಮಾಪನ ಕಾರ್ಯವು ಪರೀಕ್ಷಾ ವಿಭಾಗ, ನ್ಯಾಚುರಲ್ ಕಟ್ಟಡ (Stone Building), ಸೆಂಟ್ರಲ್ ಕಾಲೇಜ್, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು ನಡೆಯಲಿದ್ದು, ಆಯಾ ವಿಷಯಗಳ ಮೌಲ್ಯಮಾಪಕರು ತಪ್ಪದೇ ಹಾಜರಾಗಿ ವಿದ್ಯಾರ್ಥಿಗಳ ಮತ್ತು ವಿಶ್ವವಿದ್ಯಾಲಯದ ಹಿತದೃಷ್ಟಿಯಿಂದ ಕಾರ್ಯ ನಿರ್ವಹಿಸಬೇಕೆಂದು ಕೋರಲಾಗಿದೆ.**

KSU Act 2000 Section 73,74& 75 ಮತ್ತು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಪರೀಕ್ಷಾ ಕೈಪಿಡಿ2018ರ ಪ್ರಕಾರ, ಪರೀಕ್ಷೆಯ ಕೆಲಸ ಕಡ್ಡಾಯವಾಗಿದ್ದು, ಎಲ್ಲಾ ಅಧ್ಯಾಪಕರುಗಳನ್ನು ಮೌಲ್ಯಮಾಪನ ಕಾರ್ಯದಲ್ಲಿ ಭಾಗವಹಿಸಲು ಸೂಚಿಸಬೇಕೆಂದು ಮತ್ತೊಮ್ಮೆ ಕೋರಲಾಗಿದೆ.

ಆದುದರಿಂದ, ದಯಮಾಡಿ ತಾವು ಈ ವಿಚಾರದಲ್ಲಿ ಸಕ್ರಿಯ ಸಹಕಾರ ನೀಡಬೇಕೆಂದು ಕೋರಿದೆ.

**ಕುಲಸಚಿವರು(ಮೌಲ್ಯಮಾಪನ)**

**ಕುಲಸಚಿವರು (ಮೌಲ್ಯಮಾಪನ)**
**ಬೆಂಗಳೂರು ನಗರ ವಿಶ್ವವಿದ್ಯಾನಿಲಯ**
**ಸೆಂಟ್ರಲ್ ಕಾಲೇಜು ಕ್ಯಾಂಪಸ್**
**ಬೆಂಗಳೂರು – 560 001**

**ಗೆ,**

ಬೆಂಗಳೂರು ನಗರ ವಿಶ್ವವಿದ್ಯಾಲಯದ ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.

**ಪ್ರತಿಗಳು:**

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ವಿಧಾನ ವೀಧಿ, ಮಹಾರಾಣಿಕಾಲೇಜುಎದರು, ಬೆಂಗಳೂರು – 560001.
2. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು – 560001.
3. ವೆಬ್‌ಸೈಟ್ ನಿವಾಹಕರು, ಮೇಲೆ ಹೇಳಿರುವ ಸುತ್ತೋಲೆಯನ್ನು ಬೆಂಗಳೂರು ನಗರ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಹಾಗೂ ಕಾಲೇಜ್ ಪೋಟ್ರಲ್‌ನಲ್ಲಿಅಪ್ಲೋಡ್ ಮಾಡಲುಕೋರಲಾಗಿದೆ.